ಇ) ಮತ್ತು ಈ) ಸರ್ಕಾರಿ ಸೇವೆಗೆ ಸೇರಲು ನಿಗದಿಪಡಿಸಿರುವ ವಯೋಮಿತಿಯನ್ನು ಸಮೀಪಿಸುತ್ತಿರುವವರಿಗೆ ಅನುಕೂಲ ಮಾಡಲಿಕ್ಕಾಗಿ ಅವರುಗಳಿಗೆ ನೇಮಕಾತಿಯಲ್ಲಿ ಆದ್ಯತೆ ನೀಡುವುದು ಕಾನೂನಿನ ಅಥವಾ ಆಡಳಿತಾತ್ಮಕ ದೃಷ್ಟಿಯಿಂದ ಸಾಧುವಾದ ಕ್ರಮವಲ್ಲ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪಡಿತರ ಚೀಟಿಗಳ ಹಂಚಿಕೆಯ ಬಗ್ಗೆ

53 (72) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಂಚಲಾದ ಒಟ್ಟು ಪಡಿತರ ಚೀಟಿಗಳ ಸಂಖ್ಯೆ ಹಾಗೂ ಕಳೆದ ಸಾಲಿನಲ್ಲಿ ವಿತರಿಸಲಾದ ಆಹಾರಧಾನ್ಯಗಳ ಪ್ರಮಾಣ ಎಷ್ಟು;

ಆ) ಆ ಜಿಲ್ಲೆಗಳಲ್ಲಿ ಬಡತನ ರೇಖೆಯ ಕೆಳಗಿರುವವರ (ಬಿಪಿಎಲ್) ಪಟ್ಟಿಯನ್ನು ಸಿದ್ಧಪಡಿಸಲಾಗಿದೆಯೇ;

ಇ) ಸದರಿ ಜಿಲ್ಲೆಗಳಲ್ಲಿ ಬಡವರಿಗೆ ತೊಂದರೆಯಾಗುವ ರೀತಿಯಲ್ಲಿ ತಾತ್ಕಾಲಿಕ ಕಾರ್ಡುಗಳನ್ನು ಕೊಟ್ಟಿರುವುದನ್ನು ಸರ್ಕಾರ ರದ್ದುಪಡಿಸಲು ಕಾರಣಗಳೇನು;

ಈ) ಇವರಿಗೆ ಪಡಿತರ ಸೌಲಭ್ಯವನ್ನು ವ್ಯವಸ್ಥಿತವಾಗಿ ಒದಗಿಸಲು ಬೇಕಾಗುವ ಕಾಲಮಿತಿಯೇನು;

ಉ) ಇವರಿಗೆ ನೀಡುವ ಅಕ್ಕಿ, ಸೀಮೆಎಣ್ಣೆ, ಸಕ್ಕರೆಯ ಪ್ರಮಾಣವನ್ನು ಹೆಚ್ಚಿಸುವ ಯೋಜನೆ ಸರ್ಕಾರಕ್ಕೆ ಇದೆಯೇ; (ವಿವರಗಳನ್ನು ತಿಳಿಸುವುದು)?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಂಚಲಾದ ಒಟ್ಟು ಪಡಿತರ ಚೀಟಿಗಳ ಸಂಖ್ಯೆ ಮತ್ತು ಕಳೆದ ಸಾಲಿನಲ್ಲಿ ವಿತರಿಸಲಾದ ಆಹಾರಧಾನ್ಯಗಳ ಪ್ರಮಾಣ ಕೆಳಗಿನಂತಿರುತ್ತದೆ:

ಜಿಲ್ಲೆ	ಒಟ್ಟು ಪಡಿತರ ಚೀಟಿ	ಅಕ್ಕಿ (ಮೆ.ಟನ್)	ಗೋಧಿ (ಮೆ.ಟನ್)
ದ. ಕನ್ನಡ	359891	26993	64071
ಉಡುಪಿ	195802	14032	1175

ಆ) ಹೌದು.

ಇ) ಬಿ.ಪಿ.ಎಲ್. ಪಡಿತರ ಚೀಟಿಗೆ ಅನರ್ಹರೆಂದು ಕಂಡು ಬಂದಲ್ಲಿ ಅವರಿಗೆ ನೀಡಲಾದ ತಾತ್ಕಾಲಿಕ ಗುರುತಿನ ಪಡಿತರ ಚೀಟಿಗಳನ್ನು ರದ್ದು ಪಡಿಸಲಾಗಿದೆ.

ಈ) ಉದ್ಭವಿಸುವುದಿಲ್ಲ.

ಉ) ಇಲ್ಲ.

ಸರ್ಕಾರಿ ನೌಕರರಿಗೆ ನೀಡುತ್ತಿರುವ ನಿವೃತ್ತಿ ಸೌಲಭ್ಯಗಳ ಬಗ್ಗೆ

54 (73) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?